ಮುಂಜಾವು

ವಾರಪತ್ರಿಕೆ.

ಸಂಪಾದಕ: ಸಿರಿಮನೆ ನಾಗರಾಜ್

ರಿಜಿಸ್ಟರ್ಡ್ ನಂ. ಕೆಆರ್‌ಎನ್‌ಎಸ್ - 19

3ನೇ ವರ್ಷ 23ನೇ ಸಂಚಿಕೆ ಕೊಪ್ಪ 10-2-1985 ಭಾನುವಾರ ಬೆಲೆ 40 ಪೈಸೆ

ಗುಂಡೂರಾವ್, ಬೇಗಾನೆಗೆ ಟಿಕೇಟಿಲ್ಲ; ಹೆಗಡೆ ಬಸವನಗುಡಿಯಿಂದ ಸ್ಪರ್ಧೆ

ಬೆಂಗಳೂರು: ಕಾಂಗ್ರೆಸ್ (ಐ) ಉಮೇದುವಾರರ ಅಂತಿಮ ಪಟ್ಟಿ ಬಿಡುಗಡೆಯಾಗಿದ್ದು ಬ್ಯಾಲ ಮತ್ತು ಸಕಲೇಶಪುರ ಹೊರತು ಉಳಿದೆಲ್ಲ ಕ್ಷೇತ್ರಗಳಿಗೆ ಅಭ್ಯರ್ಥಿಗಳನ್ನು ಘೋಷಿಸಲಾಗಿದೆ.

ಮಾಜಿ ಮುಖ್ಯ ಮಂತ್ರಿ ಗುಂಡೂರಾವ್, ಕೆಪಿಸಿಸಿ (ಐ) ಉಪಾಧ್ಯಕ್ಷ ಹೆಚ್.ಸಿ.ಶ್ರೀಕಂಠಯ್ಯ, ಮಾಜಿ ಮಂತ್ರಿಗಳಾದ ವೈ.ರಾಮಕೃಷ್ಣ ಮತ್ತು ಮಾಣಿಕರಾವ್ ಪಾಟೀಲ್, ಬೇಗಾನೆ ರಾಮಯ್ಯ ಮುಂತಾದವರಿಗೆ ಟಿಕೆಟ್ ನಿರಾಕರಿಸಲಾಗಿದೆ.

ಕೆ.ಹೆಚ್. ಪಾಟೀಲ್, ಮೊಯ್ಲಿ, ಮಲ್ಲಿಕಾರ್ಜುನ ಖರ್ಗೆ, ಧರ್ಮಸಿಂಗ್, ಬಂಗಾರಪ್ಪ ಟಿಕೆಟ್ ಪಡೆದವರಲ್ಲಿ ಪ್ರಮುಖರಾಗಿದ್ದಾರೆ.

ಹೆಗಡೆ ಬಸವನಗುಡಿ

ಜನತಾ ಪಕ್ಷ 155 ಸ್ಥಾನಗಳಿಗೆ ತನ್ನ ಅಭ್ಯರ್ಥಿಗಳನ್ನು ಘೋಷಿಸಿದ್ದು, ಉಳಿದ ಕ್ಷೇತ್ರಗಳ ಅಂತಿಮ ಪಟ್ಟಿ ಫೆ. 10 ರಂದು ಪ್ರಕಟವಾಗಲಿದೆ. ಈ ಪೈಕಿ ಹೆಗಡೆ ಸಂಪುಟದಲ್ಲಿದ್ದ 21 ಮಂತ್ರಿಗಳು ಸ್ಥಾನ ಪಡೆದಿದ್ದಾರೆ. ಹೆಗಡೆ ಬೆಂಗಳೂರಿನ ಬಸವನಗುಡಿ ಕ್ಷೇತ್ರದಿಂದ ಸ್ಪರ್ಧಿಸಲಿದ್ದಾರೆ.

ಶೃಂಗೇರಿ ಕ್ಷೇತ್ರದಲ್ಲಿ 15 ನಾಮಪತ್ರ

ಕೊಪ್ಪ: ಮಾ. 5 ರಂದು ರಾಜ್ಯ ವಿಧಾನಸಭೆಗೆ ನಡೆಯುವ ಚುನಾವಣೆಯಲ್ಲಿ ಶೃಂಗೇರಿ ಕ್ಷೇತ್ರದಿಂದ ಸ್ಪರ್ಧಿಸಲು 15 ಜನ ಉಮೇದುವಾರರು ತಮ್ಮ ನಾಮಪತ್ರಗಳನ್ನು ಸಲ್ಲಿಸಿದ್ದಾರೆ.

ನಾಮಪತ್ರ ಸಲ್ಲಿಸಲು ಫೆ. 8 ಕಡೆಯ ದಿನವಾಗಿತ್ತು, ಹಿಂತೆಗೆದುಕೊಳ್ಳುವ ಕಡೆಯ ದಿನಾಂಕ ಫೆ. 11.

ನಾಮಪತ್ರ ಸಲ್ಲಿಸಿದವರು

ಎ.ಎಂ.ಶ್ರೀಕಂಠಗೌಡ, ಎಂ.ಎಸ್. ಶ್ರೀಕರ್, ಎಸ್.ಬಿ.ಪ್ರಭಾಕರ್, ಟಿ. ಪ್ರಕಾಶ್, ಹೆಚ್. ಜಿ. ಗೋವಿಂದ ಗೌಡ, ಯು.ಕೆ.ಶಾಮಣ್ಣ, ಎನ್.ಎಂ.ರವೀಂದ್ರ, ಎನ್.ಆರ್.ರಾಮಚಂದ್ರ, ಮಂಜುನಾಥ ಆಚಾರ್, ಮಾಗ ಚಂದ್ರ ಶೇಖರ್, ಶಂಕರ ನಾರಾಯಣ, ಎಂ.ಕೆ. ದಯಾನಂದ, ಬಿ. ಎಸ್.ವಿಠಲರಾವ್, ಎ.ಜಿ.ಬೆಳ್ಳಯ್ಯಗೌಡ ಪಿ.ಸಿ.ಮಾರ್ಕೋಸ್. (ಇದರಲ್ಲಿ ಒಬ್ಬರು ಶೃಂಗೇರಿ, 8 ಜನ ಕೊಪ್ಪ ಹಾಗೂ 6 ಜನ ನ.ರಾ.ಪುರ ತಾ|| ನವರು).

ಪೋಲೀಸ್ ಸ|| ಇ|| ಮಧ್ಯಸ್ಥಿಕೆಯಲ್ಲಿ ಮದುವೆ

ಉತ್ತಮೇಶ್ವರ: ದೂರದಿಂದ ಅಣ್ಣ-ತಂಗಿಯ ಸಂಬಂಧ ಹೊಂದಿದ್ದ ಯುವ ಜೋಡಿಯೊಂದು ಪ್ರೇಮಿಸಿ ಮುಂದುವರಿದಾಗ ಹಿರಿಯರು ಅಡ್ಡ ಬಂದು ಎರಡು ಕುಟುಂಬಗಳಲ್ಲಿ ವಿರಸವುಂಟಾಗಿ, ಪೋಲೀಸರಿಗೆ ದೂರು ಹೋಗಿತ್ತೆಂದೂ, ಅದೇ ಸಂದರ್ಭದಲ್ಲಿ ಗ್ರಾಮಕ್ಕೆ ಭೇಟಿಯಿತ್ತಿದ್ದ ಸಬ್ ಇನ್ಸ್‌ಪೆಕ್ಟರ್ ಶಶಿಕುಮಾರ್ ಗ್ರಾಮದ ಮುಖಂಡರ ಸಮ್ಮುಖದಲ್ಲಿ ಎರಡೂ ಕುಟುಂಬದವರಲ್ಲಿ ರಾಜಿ ಮಾಡಿಸಿ, ಆ ಜೋಡಿಗೆ ಮದುವೆ ಮಾಡಿಸಿದರೆಂದೂ ತಿಳಿದು ಬಂದಿದೆ.

ಶಶಿಕುಮಾರ್ ಅವರು ಈಚಿಗೆ ಕೊಪ್ಪದಲ್ಲಿ ಬೇರೆ ಬೇರೆ ಕೋಮಿನ ಒಂದು ಯುವ ಜೋಡಿಗೆ ಇಂಥದೇ ಮದುವೆ ಮಾಡಿಸಿ, ವಿರಸವಾಗಲಿದ್ದುದನ್ನು ಸರಸಗೊಳಿಸಿದರೆನ್ನಲಾಗಿದೆ.

ಈ ಸಲ 36,828 ಮತದಾರರ ಹೆಚ್ಚಳ

ಚಿಕ್ಕಮಗಳೂರು: ಮತದಾರರ ಪಟ್ಟಿ ಪರಿಷ್ಕರಣೆಯ ನಂತರ ಜಿಲ್ಲೆಯ ಆರೂ ವಿಧಾನ ಸಭಾ ಕ್ಷೇತ್ರಗಳಿಂದ ಒಟ್ಟಿಗೆ ಕಳೆದ ಲೋಕಸಭಾ ಚುನಾವಣೆಗಳಿಗಿಂತ 36, 828 ಮಂದಿ ಮತದಾರರ ಹೆಚ್ಚಳವಾಗಿದೆಯೆಂದು ಜಿಲ್ಲಾಧಿಕಾರಿ ತಿಳಿಸಿದ್ದಾರೆ.

ಕ್ಷೇತ್ರ	ಮತದಾರರು	ಹೆಚ್ಚಳ
ಶೃಂಗೇರಿ	90,477	6727
ಮೂಡಿಗೆರೆ	91,780	6363
ಚಿಕ್ಕಮಗಳೂರು	92,562	6250
ಬೀರೂರು	84,157	7868
ಕಡೂರು	82,456	5461
ತರೀಕೆರೆ	1,00,671	4159
ಒಟ್ಟು	5,42,103	36828

ಶೃಂಗೇರಿ ತಾ||	17858
ಕೊಪ್ಪ ತಾ||	43786
ನ.ರಾ. ಪುರ ತಾ||	28833

ಶಿವಮೊಗ್ಗ ಅಡಿಕೆ ಪೇಟೆ

'ವಿವೀಶಂ' ಅವರಿಂದ

ತಾರೀಕು: 1-2-1985

ಸರಕು: 2750 - 3050

ಬೆಟ್ಟೆ: 1867 - 2450

ಗೊರಬಲು: 1059 - 1869

ಸರಕಿನ ಧಾರಣೆ ಒಂದೇ ರೀತಿ ಮುಂದುವರಿದಿದೆ. ಆದರೆ ಬೆಟ್ಟೆಯ ಧಾರಣೆಯಲ್ಲಿ ಹೆಚ್ಚಳ ಕಂಡುಬಂದಿದೆ. ಹೋದವಾರ ಬೆಟ್ಟೆ ಗರಿಷ್ಠ 2100 ಇದ್ದರೆ ಈಗ 2400 ನ್ನು ದಾಟಿದೆ.

ಜಿಲ್ಲೆಯ ಅಭ್ಯರ್ಥಿಗಳಿವರು

ಜಿಲ್ಲೆಯ 6 ವಿಧಾನಸಭಾ ಕ್ಷೇತ್ರಗಳಿಗೆ ಈ ಕೆಳಕಂಡವರು ಕಾಂಗ್ರೆ ಅಭ್ಯರ್ಥಿಗಳಾಗಿದ್ದಾರೆ:

ಶೃಂಗೇರಿ-ಯು.ಕೆ.ಶಾಮಣ್ಣ, ಮೂಡಿಗೆರೆ (ಮೀಸಲು) -ಮೋಟಮ್ಮ, ಚಿಕ್ಕಮಗಳೂರು-ಸಗೀರ್ ಅಹಮದ್, ಬೀರೂರು -ಮಲ್ಲಿಕಾರ್ಜುನ ಪ್ರಸನ್ನ, ಕಡೂರು-ಎ ಕೆ.ಹುಚ್ಚಪ್ಪ, ತರೀಕೆರೆ-ಎಸ್.ಎಂ. ನಾಗರಾಜು.

ಜನತಾಪಕ್ಷದಿಂದ

ಜನತಾ ಪಕ್ಷದಿಂದ ಚಿಕ್ಕಮಗಳೂರು ಜಿಲ್ಲೆಯಲ್ಲಿ ಶೃಂಗೇರಿ ಕ್ಷೇತ್ರಕ್ಕೆ ಹೆಚ್. ಜಿ. ಗೋವಿಂದ ಗೌಡ ಮತ್ತು ಮೂಡಿಗೆರೆ ಮೀಸಲು ಕ್ಷೇತ್ರಕ್ಕೆ ಬಿ.ಬಿ.ನಿಂಗಯ್ಯ ಈ ಇಬ್ಬರು ಮಾತ್ರ ನಿಯುಕ್ತರಾಗಿದ್ದು, ಉಳಿದ 4 ಕ್ಷೇತ್ರಗಳಿಗೆ ಇನ್ನೂ ನಿರ್ಧಾರವಾಗಬೇಕಿದೆ.

ನೆರೆಯಲ್ಲಿ

ನಮ್ಮ ನೆರೆಯ ಕೆಲವು ಕ್ಷೇತ್ರಗಳ ಕಾಂಗ್ರೆ ಅಭ್ಯರ್ಥಿಗಳು: ಉಡುಪಿ - ಮನೋರಮಾ ಮಧ್ವರಾಜ್, ಮಂಗಳೂರು - ಬ್ಲೇಸಿಯಸ್ ಡಿ'ಸೋಜ, ಕಾರ್ಕಳ-ವೀರಪ್ಪ ಮೊಯಿಲಿ, ಪುತ್ತೂರು-ವಿನಯ ಚಂದ್ರ, ಶಿವಮೊಗ್ಗ-ಕೆ.ಹೆಚ್.ಶ್ರೀನಿವಾಸ್, ತೀರ್ಥಹಳ್ಳಿ-ಪಿ.ಸಿ.ರತ್ನಾಕರ್, ಹೊಸನಗರ-ಸ್ವಾಮಿರಾವ್, ಸೊರಬ-ಎಸ್.ಬಂಗಾರಪ್ಪ.

ಡಿ.ಬಿ. ಚಂದ್ರೇಗೌಡ ತೀರ್ಥಹಳ್ಳಿ ಕ್ಷೇತ್ರದಿಂದಲೇ ಸ್ಪರ್ಧಿಸುತ್ತಿದ್ದಾರೆ.

ರ್‍ಯಾಂಕ್

ನರಸಿಂಹರಾಜಪುರ: ಇಲ್ಲಿನ ಶ್ರೀ ಜ್ಯೋತಿ ವಾಣಿಜ್ಯ ವಿದ್ಯಾ ಶಾಲೆಯ ವಿದ್ಯಾರ್ಥಿನಿ ಕು|| ಸಾವಿತ್ರಿ ಕಳೆದ ನವೆಂಬರ್‌ನಲ್ಲಿ ನಡೆದ ಪರೀಕ್ಷೆಯಲ್ಲಿ ಕನ್ನಡ ಬೆರಳಚ್ಚು ಜೂನಿಯರ್‌ನಲ್ಲಿ ಶೇ. 91.5 ಅಂಕ ಗಳಿಸಿ ರಾಜ್ಯ ಮಟ್ಟದ 6 ನೇ ರ್‍ಯಾಂಕ್ ಗಳಿಸಿದ್ದಾಳೆ.

ಜನಪ್ರಿಯ ಅಧ್ಯಾಪಕ ಮೆಟಡೋರ್‌ಗೆ ಬಲಿ

ಕಿಗ್ಗ: ಜ. 24 ರಂದು ಬೆಳಿಗ್ಗೆ ಇಲ್ಲಿನ ದೇವಸ್ಥಾನಕ್ಕೆ ಯಾತ್ರಿಗಳನ್ನು ಕರೆತಂದಿದ್ದ ಒಂದು ಮೆಟಾಡೋರ್ ಕಾಲು ಹಾದಿಯ ಮೇಲೆ ನುಗ್ಗಿ, ಇಲ್ಲಿನ ಪ್ರೌಢಶಾಲೆಯಲ್ಲಿ ಸಂಸ್ಕೃತ ಅಧ್ಯಾಪಕರಾಗಿದ್ದ ಶಂಕರನಾರಾಯಣ ಜೋಯ್ಸ್‌ರನ್ನು ಬಲಿ ತೆಗೆದು ಕೊಂಡಿತು.

ಬಹಳ ಜನಪ್ರಿಯರಾಗಿದ್ದ, ಕಿರಿಯ ವಯಸ್ಸಿನವರಾಗಿದ್ದ, ಗಟ್ಟಿಮುಟ್ಟಾದ ಆಳಾಗಿದ್ದವರ ದುರ್ಮರಣದಿಂದ ಕಿಗ್ಗ ಮಾತ್ರವಲ್ಲ, ಸುತ್ತಮುತ್ತಲ ಹಳ್ಳಿಗಳ ಜನರೂ ಶೋಕತಪ್ತರಾದರು.

ಶೃಂಗೇರಿಯಲ್ಲಿ ಪೋಸ್ಟ್ ಮಾರ್ಟಂ ಆದ ನಂತರ ಕಿಗ್ಗ ಪ್ರದೇಶದ ಕಾಲೇಜು ವಿದ್ಯಾರ್ಥಿಗಳು ಟ್ರಾಕ್ಟರಿನಲ್ಲಿ ಮೌನವಾಗಿ ಶವವನ್ನು ಹಿಂಬಾಲಿಸಿದರಲ್ಲದೆ, ಕೆಲ್ಲಾರಿನಿಂದ ಮೃತರ ಮನೆಯವರೆಗಿನ ಶವಯಾತ್ರೆಯಲ್ಲಿ ಅಪಾರ ಜನ ಭಾಗವಹಿಸಿ ತಮ್ಮ ಅಂತಿಮ ಗೌರವ ಸಲ್ಲಿಸಿದರು. ಶಾಲೆಯ ಬಳಿ ಮೌನಾಚರಣೆ ನಡೆಯಿತು. ಜ. 25 ರಂದು ಪ್ರೌಢಶಾಲಾ ಅಧ್ಯಾಪಕರು ಮತ್ತು ಮಕ್ಕಳು ಕೆಲ್ಲಾರಿನವರೆಗೆ ಮೌನ ಮೆರವಣಿಗೆ, ಸಂತಾಪ ಸಭೆ ನಡೆಸಿದರು.

ಮೃತರು ವೃದ್ಧ ತಂದೆ-ತಾಯಿಗಳನ್ನು, ಪತ್ನಿ, 2 ಗಂಡು, 2 ಹೆಣ್ಣು ಮಕ್ಕಳು, ಮತ್ತು ಅಪಾರ ಬಂಧು ವರ್ಗವನ್ನು ಅಗಲಿದ್ದಾರೆ.

"ಎಲ್ಲ ಧರ್ಮಗಳೂ ದ್ವೇಷಾತೀತ"

"ಪ್ರಪಂಚದ ಯಾವುದೇ ಧರ್ಮವೂ ದ್ವೇಷವನ್ನು ಬೋಧಿಸುವುದಿಲ್ಲ. ಎಲ್ಲ ಧರ್ಮಗಳೂ ದ್ವೇಷಾತೀತ" ಎಂದು ಖ್ಯಾತ ತತ್ವಶಾಸ್ತ್ರ ವಿದ್ವಾಂಸರಾದ ಪ್ರೊ॥ ಎಸ್. ಎಸ್. ರಾಘವಾಚಾರ್ ಹೇಳಿದರು.

ಶೃಂಗೇರಿಯಲ್ಲಿ ಫೆ.2ರಂದು ಧರ್ಮ ಸಮ್ಮೇಳನದ ಉದ್ಘಾಟನಾ ಸಮಾರಂಭದಲ್ಲಿ ಪ್ರಾಸ್ತಾವಿಕ ಭಾಷಣ ಮಾಡುತ್ತ, ಜಗತ್ತಿನ ವಿವಿಧ ಧರ್ಮಗಳ ಅಂತಃಸತ್ವ ಒಂದೇ ಎಂಬುದನ್ನು ಅವರು ವಿವರಿಸಿದರು.

ಧರ್ಮದ ಬಗ್ಗೆ ಇಂದು ಸಾಮಾನ್ಯವಾಗಿ ಪ್ರಚಲಿತವಿರುವ ಕೆಲವು ವಿಚಾರಗಳೆಂದರೆ, ಧರ್ಮದಿಂದ ಸಮಾಜಕ್ಕೆ ಧಕ್ಕೆಯಿದೆ; ಆದ್ದರಿಂದ ನಾವು ಸೆಕ್ಯುಲರ್ ಆಗಿರಬೇಕು; ಇಂದು ಸಮಾಜಕ್ಕೆ ಬೇಕಿರುವುದು ಲೌಕಿಕ ವಿಚಾರಗಳು ಮಾತ್ರ, ಪಾರಲೌಕಿಕ ವಿಚಾರಗಳಲ್ಲ, ಇತ್ಯಾದಿ.

ಆದರೆ ಧರ್ಮವೆಂದರೆ, ಈಗ ಬಳಕೆಯಲ್ಲಿರುವಂತೆ ನಂಬಿಕೆಗಳು, ಆಚಾರಗಳು ಮಾತ್ರವೇ ಅಲ್ಲ. ಇಂಥ 'ಧರ್ಮ' ಮೌಢ್ಯಕ್ಕೆ, ಪರಸ್ಪರ ದ್ವೇಷಕ್ಕೆ, ಅನರ್ಥಕ್ಕೆ ಕಾರಣವಾಗುತ್ತದೆ. ತತ್ವ ಮತ್ತು ವಿಚಾರವಂತಿಕೆಯಿಂದ ಕೂಡಿರುವುದು ನಿಜವಾದ ಧರ್ಮ. ಇದು ಸಮಾಜಕ್ಕೆ ಅನಪೇಕ್ಷಿತವಲ್ಲ—ಎಂದು ಈ ವಿದ್ವಾಂಸರು ಹೇಳಿದರು.

ಧರ್ಮದಲ್ಲಿ ಭೇದವಿಲ್ಲ, ಸ್ವದೇಶದ್ದು—ಪರದೇಶದ್ದು ಎಂಬ ತಾರತಮ್ಯ ಸಲ್ಲದು. ತಿರಸ್ಕರಣೀಯವಾದ ಧರ್ಮ ಜಗತ್ತಿನಲ್ಲಿ ಹುಟ್ಟಿಯೇ ಇಲ್ಲ.

ವಿಶ್ವದಲ್ಲಿ ಕಣ್ಣಿಗೆ ಕಾಣುವ, ಇಂದ್ರಿಯ ಜನ್ಯವಾದದ್ದು ಮಾತ್ರವಲ್ಲ, ಇಂದ್ರಿಯಾತೀತವಾದದ್ದೂ ಇದೆ—ಎಂಬ ನಂಬಿಕೆ ಎಲ್ಲ ಧರ್ಮಗಳ ಸಾಮಾನ್ಯ ಅಂಶ. ಒಂದೊಂದು ಧರ್ಮದಲ್ಲಿ ಒಂದೊಂದು ವಿಶಿಷ್ಟತೆಯಿದೆ. ಬೌದ್ಧ ಧರ್ಮ ನಿಷ್ಠೆಗೆ ಹೆಸರಾದರೆ, ಜೈನ ಧರ್ಮ ಜೀವ—ಅಜೀವ, ಆತ್ಮ—ಅನಾತ್ಮಗಳ ಚಿಂತನೆಯಲ್ಲಿ ಗರಿಮೆ ಸಾಧಿಸಿದೆ. ಕ್ರೈಸ್ತ ಧರ್ಮದ ಭಕ್ತಿ ಅನನ್ಯತೆ ಭಾರತದ ಯಾವ ಭಕ್ತಿ ಪಂಥಕ್ಕೂ ಕಮ್ಮಿಯಿಲ್ಲ. ಹಾಗೆಯೇ ಇಸ್ಲಾಮಿನ ಏಕದೇವತಾವಾದ ಕೂಡ.

ಹೀಗೆ ಒಂದೇ ಅಂತಃಸತ್ವವುಳ್ಳ ಈ ಎಲ್ಲ ಧರ್ಮಗಳ ಸಿದ್ಧಾಂತಗಳಲ್ಲಿ ಮಾತ್ರ ವ್ಯತ್ಯಾಸವಿದ್ದು, ಆದ್ದರಿಂದಲೇ ಅವನ್ನು ಬೇರೆ ಬೇರೆ ಧರ್ಮ ಎನ್ನುವುದಕ್ಕಿಂತ ಬೇರೆ ಬೇರೆ ದರ್ಶನಗಳೆಂದು — ವೇದಾಂತ ದರ್ಶನ, ವೀರಶೈವ ದರ್ಶನ ಕ್ರೈಸ್ತ ದರ್ಶನ, ಜೈನ ದರ್ಶನ ಮುಂತಾಗಿ—ಕರೆದಿರುವುದು ಸೂಕ್ತವಾಗಿದೆ ಎಂದು ಮೈಸೂರು ವಿ. ವಿ. ನಿಲಯದ ಈ ನಿವೃತ್ತ ತತ್ವಶಾಸ್ತ್ರ ಪ್ರಾಧ್ಯಾಪಕ ವಿಶ್ಲೇಷಿಸಿದರು.

"ಪರಸ್ಪರರನ್ನು ದ್ವೇಷಿಸಲು ನಮ್ಮಲ್ಲಿ ಧರ್ಮಗಳು ಯಥೇಚ್ಛವಾಗಿವೆ. ಆದರೆ ಪ್ರೀತಿಸಲು ನಮಗೆ (ಕಲಿಸುವ) ಧರ್ಮಗಳು ಸಾಕಷ್ಟಿಲ್ಲ" ಎಂಬ ಇಂಗ್ಲಿಷ್ ನಾಣ್ಣುಡಿಯನ್ನು ಜ್ಞಾಪಿಸಿಕೊಂಡು, "ಗ್ರಂಥಸ್ಥ ದಾರ್ಶನಿಕರು ಎಲ್ಲದರಲ್ಲೂ ಇದ್ದಾರೆ; ಆದರೆ ಸರಿಯಾದ ಅನುಯಾಯಿಗಳು ಇಂದು ಯಾವ ಧರ್ಮಕ್ಕೂ ಇಲ್ಲ" ಎಂದ ಪ್ರೊ॥ ರಾಘವಾಚಾರ್, ಯಾವ ಧರ್ಶನವೂ ನಿಷ್ಫಲವಲ್ಲ, ಪರಸ್ಪರ ಅರಿವು, ಸಾಮರಸ್ಯ ಧರ್ಮಾಚರಣೆಯ ಮೊದಲ ಅಗತ್ಯವೆಂದು ಒತ್ತಿಹೇಳಿದರು.

ದೈವೀ ಸಾನ್ನಿಧ್ಯ

ಶೃಂಗೇರಿ ಹಿರಿಯ ಜಗದ್ಗುರುಗಳು ತಮ್ಮ ಅನುಗ್ರಹ ಭಾಷಣದಲ್ಲಿ, "ದೇವಾಲಯ ಸುಂದರವಾಗಿ, ಪ್ರಶಾಂತವಾಗಿ, ಶುಚಿಯಾಗಿದ್ದಷ್ಟೂ ದೈವೀ ಸಾನ್ನಿಧ್ಯ ಹೆಚ್ಚುತ್ತೆ. ದೇವಾಲಯ ಜೀರ್ಣವಾದಾಗ ಇಂಥ ಸಾನ್ನಿಧ್ಯಕ್ಕೆ ಕುಂದುಂಟಾಗುತ್ತೆ. ಆಗ ಅದರ ಜೀರ್ಣೋದ್ಧಾರ ಮಾಡಿ ಕುಂಭಾಭಿಷೇಕ ಮಾಡಬೇಕೆಂದು ಶಾಸ್ತ್ರ ವಿಧಿ. ಹಾಗೆಯೇ ದೇವಾಲಯದ ಸಂಪತ್ತು ಹೆಚ್ಚಿದಾಗಲೂ ಅದರ ಸದ್ವಿನಿಯೋಗಕ್ಕಾಗಿ ಕುಂಭಾಭಿಷೇಕ ಮಾಡಬೇಕು" ಎಂದು ಈ ಉತ್ಸವದ ಪ್ರಶಸ್ತತೆಯನ್ನು ವಿವರಿಸಿದರು. §§

ನಮ್ಮ ದೇಶದಲ್ಲಿ '... 'ಎಲ್ಲ ಧರ್ಮಗಳಿಗೂ ... ಎಂಬ ಹೆಸರಿನಲ್ಲಿ ಯಾವ... ರವವಿಲ್ಲವಾಗಿದೆ ಎಂದು ... ಯವರು, "ಅನ್ಯ ಧರ್ಮ... ಗಳಲ್ಲಿ ಅವರಿಗೆ ಏನಾಗ... ರಿಸುವ ನಮ್ಮ ಸರ್ಕಾರ ... ಬೇಕಾಗಿದೆಯೆಂದು ವಿಚಾ... ದ ಹಿರಿಯ ಗುರುಗಳ ಮಾ... ಸಿದರು.

ಸಮಾಜದಲ್ಲಿ ಇಂದು ... ಲ್ಲೋಲ-ಕಲ್ಲೋಲ ಇತ್ಯಾದಿ ... ಧರ್ಮದ ಅನುಷ್ಠಾನ ಅತಿ ಮು... ಪ್ರಜ್ಞೆ ಸದಾ ಜಾಗೃತವಾ... ಇಂಥ ಉತ್ಸವಗಳು ನಡೆಯ... ಎಂದು ಅವರು ತಿಳಿಸಿದರು.

ಫೆ. 2 ಮತ್ತು 3 ರಂದು ... ದ್ವಾಂಸರಿಂದ ವಿವಿಧ ಭಾರತೀಯ... ಗಳ ಬಗ್ಗೆ ಗೋಷ್ಠಿಗಳು ನಡೆದವು... ರಾಘವಾಚಾರ್ ಧರ್ಮ ಸಮ್ಮೇ... ಧ್ಯಕ್ಷರಾಗಿದ್ದರು.

ಸಾಹಿತ್ಯ ಸಮ್ಮೇಳನ

ಫೆ. 4 ಮತ್ತು 5 ರಂದು ಪ್ರೊ... ಪಿ. ಎಲ್. ಶಾಸ್ತ್ರಿಯವರ ಅಧ್ಯಕ್ಷ... ನಡೆದ ಸಾಹಿತ್ಯ ಸಮ್ಮೇಳನದಲ್ಲಿ ... ತೀಯ ಸಾಹಿತ್ಯದಲ್ಲಿ ಧರ್ಮ ... ಎಂಬ ವಿಷಯವಾಗಿ ವಿವಿಧ ... ವಿದ್ವಾಂಸರಿಂದ ಗೋಷ್ಠಿಗಳು ನ... ಸಿಂಡಿಕೇಟ್ ಬ್ಯಾಂಕಿನ ಅಧ್ಯಕ್ಷ ... ಕೃಷ್ಣರಾವ್ ಸಮ್ಮೇಳನ ಉದ್ಘಾಟಿ...

"ಧರ್ಮದ ಅನುಷ್ಠಾನಕ್ಕಿಂತ ಅದರ ಬಳಕೆಯೇ ಹೆಚ್ಚಾಗಿದೆ"

—ವೀರೇಂದ್ರ ಹೆಗ್ಗಡೆ

ಧರ್ಮ ಸಮ್ಮೇಳನವನ್ನು ಉದ್ಘಾಟಿಸಿದ ಧರ್ಮಸ್ಥಳದ ಡಿ. ವೀರೇಂದ್ರ ಹೆಗ್ಗಡೆಯವರು, ಇಂದು ಕುಂಭಾಭಿಷೇಕಕ್ಕೆ ಸಿದ್ಧವಾಗಿರುವ ದೇವಸ್ಥಾನದ ಶಿಲಾ ರಚನೆಯಂತೆ ಧರ್ಮವೂ ಶಾಶ್ವತ. ಆದರೆ ಅಷ್ಟೇ ಸಾಲದು. ಧರ್ಮ ದೃಢವೂ ಆಗಿರಬೇಕು ಎಂದರು.

ಇಂದು ಧರ್ಮದ ಅನುಷ್ಠಾನಕ್ಕಿಂತ ನಮ್ಮ ಸೀಮಿತ ಉದ್ದೇಶಗಳಿಗಾಗಿ ಧರ್ಮದ ಬಳಕೆಯೇ ಜಾಸ್ತಿಯಾಗಿದೆಯೆಂದ ಹೆಗ್ಗಡೆ ಧಾರ್ಮಿಕ ಪೀಠಗಳು ಸಮುದ್ರದ ದೀಪ ಸ್ತಂಭಗಳಂತೆ, ಸಂಸಾರ ಸಾಗರದಲ್ಲಿ ದಿಕ್ಕು ತಪ್ಪುವ ಮನುಷ್ಯರಿಗೆ ಧರ್ಮದ ಬೆಳಕಿನಿಂದ ಮಾರ್ಗದರ್ಶನ ನೀಡುತ್ತಿವೆ ಎಂದರು.

ಮೂಢನಂಬಿಕೆ ಎಂಬುದಿಲ್ಲ. ನಮ್ಮ ನಂಬಿಕೆಗಳು ದೃಢ. ಅದನ್ನರ್ಥಮಾಡಿಕೊಳ್ಳಲಾರದವರಿಗೆ ಅದು ಹಾಗೆ ಕಾಣುತ್ತದೆ ಎಂದ ಅವರು, ಸಮಾಜದಲ್ಲಿ ಇಂದು ಕೋಟ್ಯಾಂತರ ರೂಪಾಯಿ ಮದ್ಯಪಾನದಂಥ ದುರ್ವ್ಯಯಕ್ಕೆ ಈಡಾಗುತ್ತದೆ. ಆದರೆ ಅದನ್ನು ಪ್ರಶ್ನಿಸದ ಜನ, ನಾವೆಲ್ಲ ಏಕಾದಶೀ ಉಪವಾಸ ಮಾಡಿ ಉಳಿಸಿದ ಧನ—ದ್ರವ್ಯದಿಂದ ಯಜ್ಞ—ಯಾಗಾದಿಗಳನ್ನು ಮಾಡಿದರೆ ಪೋಲು ಎಂದು ಕರೆಯುತ್ತಾರೆಂದು ಟೀಕಿಸಿದರು.

ಕೊಪ್ಪ ಪುರಸಭೆಯ ಒಂದು ವರ್ಷದ ಸಾಧನೆ - ಯೋಜನೆಗಳ ಪಕ್ಷಿನೋಟ

ಕೊಪ್ಪ: ಇಲ್ಲಿನ ಪುರಸಭೆಯ ಹಾಲಿ ಕೌನ್ಸಿಲ್ ಅಧಿಕಾರಕ್ಕೆ ಬಂದು ಜ. 25 ಕ್ಕೆ 1 ವರ್ಷ ತುಂಬಿತು. ಈ ಅವಧಿಯಲ್ಲಿ ಕೈಗೊಂಡ ಹಾಗೂ ಮುಂದೆ ಕೈಗೊಳ್ಳಲು ಯೋಜಿಸಿರುವ ಪುರೋಭಿವೃದ್ಧಿ ಕಾರ್ಯಗಳ ಪಕ್ಷಿನೋಟವನ್ನು ಅಧ್ಯಕ್ಷ ಕೆ. ವಿ. ಮಂಜುನಾಥ ಶೆಟ್ಟಿ ನೀಡಿದ್ದಾರೆ.

ಪ್ರಮುಖವಾದ ಕಾಮಗಾರಿಗಳಿಗಾಗಿ 2 ಲಕ್ಷ 82 ಸಾವಿರ ರೂ. ಗೂ ಹೆಚ್ಚು ಹಣ ವ್ಯಯವಾಗಿದ್ದು ಅವುಗಳಲ್ಲಿ ಕೆಲವು ಇಲ್ಲಿವೆ.

ಟೌನಿನ ವಿವಿಧ ಕಡೆ ಟಾರ್ ಹಾಕಿಸಲು 46,000, ವಿವಿಧ ರಸ್ತೆಗಳ ಜಲ್ಲಿಗೆ 26,000, ನಾನಾ ಭಾಗಗಳಲ್ಲಿ ಡ್ರೈನೇಜ್ ನಿರ್ಮಾಣ ಮತ್ತು ರಿಪೇರಿಗೆ 44,500, ಪುರಸಭೆಗೆ ಸೇರಿದ ಕಟ್ಟಡಗಳ ರಿಪೇರಿಗೆ 17,500, ಇಂದಿರಾ ನಗರ, ಕಾಳಿದಾಸ ರಸ್ತೆ. ಅಂಬೇಡ್ಕರ್ ರಸ್ತೆ, ಜೆಎಂಜೆ ಟಾಕೀಸ್ ರಸ್ತೆಗಳಲ್ಲಿ ಹೊಸದಾಗಿ ಪೈಪ್‌ಲೈನ್ ಹಾಕಿಸಲು 55,000, ವಿವಿಧ ರಸ್ತೆಗಳಲ್ಲಿ 4 ಸೋಡಿಯಂ ಲ್ಯಾಂಪ್ ಮತ್ತು 55 ಟ್ಯೂಬ್ ಲೈಟ್‌ಗಳಿಗೆ 24,000, ಹಿರೇಕೆರೆಯ ಕೋಡಿ ರಿಪೇರಿ ಮಾಡಿ ಏರಿಯನ್ನು ಏರಿಸಲು ಸರ್ಕಾರದಿಂದ ಧನ ಸಹಾಯ ಪಡೆದು 40,000 ರೂ. — ಇತ್ಯಾದಿ.

ಮುಂದಿನ ಸಾಲಿನಲ್ಲಿ ಕೈಗೊಳ್ಳಲು ಉದ್ದೇಶಿಸಿರುವ ಕೆಲವು ಪ್ರಮುಖ ಕಾರ್ಯಗಳೆಂದರೆ :

ಜೆಎಂಜೆ ಟಾಕೀಸ್ ರಸ್ತೆಯಲ್ಲಿ ... ಪಿಂಗ್ ಕಾಂಪ್ಲೆಕ್ಸ್ ಕಟ್ಟಲು 5 ಲಕ್ಷ... ಮಾರ್ಕೆಟ್ ರಸ್ತೆ, ಟಾಕೀಸ್ ರಸ್ತೆಗ... ಟಾರ್ ಹಾಕಿಸಲು 1,35,000, ವಿ... ಭಾಗಗಳಲ್ಲಿ ಡ್ರೈನೇಜ್ ಮಾಡಿಸಲು ಟೆಂ... ಡರ್ ಕರೆದು ವರ್ಕ್ ಆರ್ಡರ್ ಕೊಟ್ಟಿ... ವುದು 25,000, ಪುರಸಭೆಯ ಕ್ರೀಡಾ... ಗಣದಲ್ಲಿ ರಂಗಮಂದಿರ ಕಟ್ಟಲು 50,000 ಕೊಪ್ಪ ನೀರು ಶೇಖರಣೆಗೆ 1 ಲಕ್ಷ ಗ್ಯಾಲ... ನಿನ ಇನ್ನೊಂದು ಟ್ಯಾಂಕ್ ಕಟ್ಟುವುದು, 60 ಅಶ್ವಶಕ್ತಿಯ ಪಂಪ್‌ಸೆಟ್ಟನ್ನು ಹರಿಹರ... ಪುರ ಹೊಳೆಯ ಬಳಿ ಅಳವಡಿಸುವುದು ಸೇರಿ... ದಂತೆ 6.5 ಲಕ್ಷ ರೂ. ಯೋಜನೆ ನಗರ... ನೀರು ಸರಬರಾಜಿನ ಬೆಂಗಳೂರು ಮುಖ್ಯ ಇಂಜಿನಿಯರ್‌ರ ಮಂಜೂರಾತಿಗೆ ಹೋ... ಗಿದೆ, ಮೀನು ಮಾರ್ಕೆಟ್‌ನಲ್ಲಿ ಹೊಸದಾಗಿ ಒಣಮೀನು ಶೇಖರಣಾ ಕೊಠಡಿ ಕಟ್ಟಲು ವರ್ಕ್ ಆರ್ಡರ್ ಕೊಟ್ಟಿರುವುದು 44,000 ಬಸ್ ನಿಲ್ದಾಣದ ಹತ್ತಿರ ಸಾರ್ವಜನಿಕ ಮೂತ್ರಿ ಮತ್ತು ಸ್ನಾನದ ಗೃಹ ಕಟ್ಟಿಸಲು ಸರ್ಕಾರ 1.5 ಲಕ್ಷ ರೂ. ನೀಡಿದ್ದು, ಈಗಾಗಲೇ ಟೆಂಡರ್ ಕರೆಯಲಾಗಿದೆ.

ಇವೇ ಮುಂತಾದ ಪುರೋಭಿವೃದ್ಧಿ ಕಾರ್ಯಗಳನ್ನು ಯಶಸ್ವಿಯಾಗಿ ನಿರ್ವಹಿಸಲು ತೆರಿಗೆದಾರರು ಸಕಾಲದಲ್ಲಿ ತೆರಿಗ ಪಾವತಿ ಮಾಡಿ ಸಹಕರಿಸಬೇಕೆಂದು ಮಂಜುನಾಥ ಶೆಟ್ಟಿ ಮನವಿ ಮಾಡಿದ್ದಾರೆ.

ಮಲೆನಾಡಿನಲ್ಲಿ ನೀಲಗಿರಿ ಪ್ರತಿಭಟನೆಗೆ ಕರೆ

ಮಲೆನಾಡಿನ ನಿಸರ್ಗದತ್ತ ಅರಣ್ಯಗಳನ್ನು ಉಳಿಸುವ ಸಲುವಾಗಿ, ಅವ್ಯಾಹತವಾಗಿ ನೀಲಗಿರಿ ಮರ ನೆಡುವಿಕೆಯನ್ನು ವಿರೋಧಿಸಲು ಸಾಗರದ 'ವೃಕ್ಷ ಸಂರಕ್ಷಣಾ ವೇದಿಕೆ' ಕರೆ ನೀಡಿದೆ.

ಪರಿಸರದ ಮೇಲೆ ವಿಪರೀತ ಪರಿಣಾಮವನ್ನುಂಟುಮಾಡುವ ನೀಲಗಿರಿ ಮರಗಳನ್ನು ಭದ್ರಾವತಿ, ಶಿವಮೊಗ್ಗ, ಸಾಗರ, ಕೊಪ್ಪ, ಚಿಕ್ಕಮಗಳೂರು ತಾ॥ಗಳ ಒಟ್ಟು 75 ಸಾವಿರ ಎಕರೆ ಪ್ರದೇಶದಲ್ಲಿ ನೆಡಲು ಸರ್ಕಾರ ಉದ್ದೇಶಿಸಿದೆಯೆಂದು ಗೊತ್ತಾಗಿದೆ.

ಹರಿಹರ ಪಾಲಿಫೈಬರ್ಸ್ ಮತ್ತು ಕರ್ನಾಟಕ ಫಾರೆಸ್ಟ್ ಪ್ಲಾಂಟೇಷನ ಸಂಯುಕ್ತ ಕಾರ್ಯಾಚರಣೆ ಇದಾಗಿದ್ದು, ಇದಕ್ಕಾಗಿ 'ಕರ್ನಾಟಕ ಪಲ್ಪ್‌ವುಡ್ ಲಿಮಿಟೆಡ್' ಎಂಬ ಕಂಪೆನಿ ಹುಟ್ಟು ಹಾಕಲು ತೀರ್ಮಾನಿಸಿರುವುದಾಗಿಯೂ ಹೇಳಲಾಗಿದೆ. 'ನೀಲಗಿರಿಯನ್ನು ಮಲೆನಾಡಿನಲ್ಲಿ ಬೆಳೆಸುವುದಿಲ್ಲ'ವೆಂಬ ಅರಣ್ಯ ಇಲಾಖೆ ಭರವಸೆ ಇದರಿಂದ ಸುಳ್ಳಾಗಿದೆಎಂದಿರುವ ವೇದಿಕೆ ಈ ಬಗ್ಗೆ ಜನ ಜಾಗೃತಿಗೆ ಕರೆ ನೀಡಿದೆ.

ಸರ್ಕಾರದ ಈ ನಿಲುವನ್ನು ಪ್ರತಿಭಟಿಸುವಂತೆ ಹಾಗೂ ಸರ್ಕಾರ ಬಿರ್ಲಾ ಕಂಪೆನಿ ಜೊತೆ ಮಾಡಿಕೊಂಡಿರುವ ಒಪ್ಪಂದ ರದ್ದಿಗೆ ಒತ್ತಾಯಿಸುವಂತೆ ವೇದಿಕೆ ಪರಿಸರ ಪ್ರೇಮಿಗಳನ್ನು ಕೋರಿದೆ.

ಶಾಲಾ ವಾರ್ಷಿಕೋತ್ಸವಗಳು

ಬಸರೀಕಟ್ಟೆ

ಬಸರೀಕಟ್ಟೆ: ಇಲ್ಲಿನ ಸದ್ಗುರು ಪ್ರೌಢ ಶಾಲೆಯ ವಿದ್ಯಾರ್ಥಿ ಸಂಘದ ವಾರ್ಷಿಕೋತ್ಸವ ಜ. 26ರಂದು ಹೆಚ್.ಬಿ. ರಾಜಗೋಪಾಲ್ ಇವರ ಅಧ್ಯಕ್ಷತೆಯಲ್ಲಿ ನಡೆಯಿತು. ಕೊಪ್ಪ ಕಿರಿಯ ಕಾಲೇಜಿನ ಅಧ್ಯಾಪಕರಾದ ಡಾ|| ಎಸ್.ವಿ.ಮಲ್ಲಿಕಾರ್ಜುನ ಭಟ್ ಮುಖ್ಯ ಅತಿಥಿಗಳಾಗಿದ್ದರು. ವಿದ್ಯಾರ್ಥಿ ಹಸ್ತ ಪತ್ರಿಕೆ "ವನಸುಮ" ವನ್ನು ಅಧ್ಯಕ್ಷರು ಬಿಡುಗಡೆ ಮಾಡಿದರು. ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾದವರಿಗೆ ಮುಖ್ಯ ಅತಿಥಿಗಳು ಬಹುಮಾನಗಳನ್ನ ವಿತರಿಸಿದರು. ನಾಗೇಶ ನಾಯಕ್ ಸ್ವಾಗತಿಸಿ, ಹೆಚ್.ಎಸ್. ವಿಶ್ವನಾಥರಾವ್ ವಂದಿಸಿದರು.

ವಿದ್ಯಾರ್ಥಿಗಳಿಂದ "ಕಮಲು ಮದುವೆ" ಎಂಬ ಸಾಮಾಜಿಕ ಹಾಗೂ ವಿದ್ಯಾರ್ಥಿನಿಯರಿಂದ "ತ್ಯಾಗಮಯೀ ಪನ್ನಾ" ಎಂಬ ಐತಿಹಾಸಿಕ ನಾಟಕಗಳು ಮತ್ತು ಇತರ ಮನೋರಂಜನಾ ಕಾರ್ಯಕ್ರಮಗಳು ಜರುಗಿದವು. ಸಹ ಅಧ್ಯಾಪಕರಾದ ಹೆಚ್. ಎಸ್. ಕೃಷ್ಣಮೂರ್ತಿ ಕಾರ್ಯಕ್ರಮಗಳನ್ನು ನಿಯೋಜಿಸಿದ್ದರು.

ನಾರ್ವೆ ಪ್ರೌಢಶಾಲೆ

ಸ್ವಯಂ ಪ್ರಕಾಶ ಸರಸ್ವತಿ ಪ್ರೌಢ ಶಾಲೆಯ ವಾರ್ಷಿಕೋತ್ಸವ ಹರಿಹರಪುರ ಮಠಾಧೀಶರ ಅಧ್ಯಕ್ಷತೆಯಲ್ಲಿ ಈಚೆಗೆ ನಡೆಯಿತು. ಕೊಪ್ಪ ಕಿರಿಯ ಕಾಲೇಜಿನ ಉಪ ಪ್ರಾಂಶುಪಾಲರಾದ ಮಲ್ಲಿಕಾರ್ಜುನಯ್ಯ ಮುಖ್ಯ ಅತಿಥಿಗಳಾಗಿದ್ದರು. ಶಾಲಾ ಕೈಹೊತ್ತಗೆ "ಸ್ವಯಂ ಪ್ರಕಾಶ"ವನ್ನು ರಾಘವೇಂದ್ರ ರಾವ್ ಬಿಡುಗಡೆ ಮಾಡಿದರು. ಕೆ. ಎಸ್. ಕಾಡಪ್ಪ ಗೌಡ ಬಹುಮಾನ ವಿತರಣೆ ಮಾಡಿದರು. ವಿದ್ಯಾರ್ಥಿ–ವಿದ್ಯಾರ್ಥಿನಿಯರಿಂದ ನಾಟಕ, ಮನರಂಜನಾ ಕಾರ್ಯಕ್ರಮಗಳು ನಡೆದವು.

(ವರದಿ: ಕೆ. ರಮೇಶ್)

ಬಾಲಿಕಾ ಪ್ರೌಢಶಾಲೆ ಶೃಂಗೇರಿ

ಜಗದ್ಗುರು ಅಭಿನವ ವಿದ್ಯಾತೀರ್ಥ ಬಾಲಿಕಾ ಪ್ರೌಢಶಾಲೆಯ ವಾರ್ಷಿಕೋತ್ಸವ ಪಶುವೈದ್ಯಾಧಿಕಾರಿ ಸೂರ್ಯನಾರಾಯಣ ರಾವ್ ಅವರ ಅಧ್ಯಕ್ಷತೆಯಲ್ಲಿ ಈಚೆಗೆ ನಡೆಯಿತು. ವಿವಿಧ ಆಟೋಟ ಸ್ಪರ್ಧೆಗಳಲ್ಲಿ ವಿಜೇತರಾದ ವಿದ್ಯಾರ್ಥಿನಿಯರಿಗೆ ಉಮ ಎಸ್.ರಾವ್ ಬಹುಮಾನ ವಿತರಣೆ ಮಾಡಿದರು. ಎಸ್. ಸುಗುಣ ಸ್ವಾಗತಿಸಿ, ಕೆ.ಬಿ.ಶಶಿಕಲಾ ವಂದಿಸಿದರು.

ವಾರ್ಷಿಕೋತ್ಸವದ ಅಂಗವಾಗಿ ವಿವಿಧ ಮನರಂಜನಾ ಕಾರ್ಯಕ್ರಮಗಳು ಕುಂಭಾಭಿಷೇಕ ಮಹೋತ್ಸವದ ಶಾರದಾ ಮಂಟಪದಲ್ಲಿ ನಡೆದುವು.

ಅಬಕಾರಿ ದಾಳಿ

ಕೊಪ್ಪ: ಚಾವಲ್ಮನೆ ಗ್ರಾಮದ ಶೃಂಗೇರಿ ಪಾಲ್ ಅರಣ್ಯದಲ್ಲಿ ಕಳ್ಳ ಭಟ್ಟಿ ಕೇಂದ್ರದ ಮೇಲೆ ಅಬಕಾರಿ ತನಿಕಾಧಿಕಾರಿ ಜಿ. ಕೆ. ಗೋವಿಂದನ್ನವರ್, ಉಪ ತನಿಖಾಧಿಕಾರಿ ಕೆ.ಬಿ. ದ್ಯಾವಪ್ಪ ಮತ್ತು ಸಿಬ್ಬಂದಿ ಈಡೆಗೆ ದಾಳಿ ನಡೆಸಿ, ಚಾಲ್ತಿ ಭಟ್ಟಿ ಉಪಕರಣಗಳನ್ನೂ ಗುನ್ಹೆ ಮಾಲನ್ನೂ ವಶಪಡಿಸಿಕೊಂಡು, ಈ ಸಂಬಂಧದಲ್ಲಿ ಗೋಪಾಲ ಬಿನ್ ಬೆಳ್ಳೀಗೌಡ ಎಂಬಾತನನ್ನು ಬಂಧಿಸಿದ್ದಾರೆ. ಸೀನ ಗೌಡ ಮತ್ತು ಅಣ್ಣೇಗೌಡ ಎಂಬಿಬ್ಬರು ಪರಾರಿಯಾಗಿದ್ದು ಮುಂದಿನ ತನಿಖೆ ನಡೆಯುತ್ತಿದೆ.

ಸರ್ಕಾರಕ್ಕೆ ಅಭಿನಂದನೆ

ಶೃಂಗೇರಿ: ಮುಖ್ಯಮಂತ್ರಿಯವರು ಸ್ಟೈಪೆಂಡರಿ ಪದವೀಧರರ ಸಮಸ್ಯೆಯನ್ನು ತಾತ್ಕಾಲಿಕವಾಗಿ ಬಗೆಹರಿಸಿರುವುದಕ್ಕೆ ರಾಜ್ಯ ಸರ್ಕಾರವನ್ನು ಶೃಂಗೇರಿ ತಾಲ್ಲೂಕ್ ಸ್ಟೈಪೆಂಡರಿ ಸಂಘ ಅಭಿನಂದಿಸಿದೆ.

ಮೇಗೂರು ರಥೋತ್ಸವ, ಧರ್ಮಜಾಗೃತಿ ಸಮಾವೇಶ

ಮೇಗೂರು: ಇಲ್ಲಿನ ಶ್ರೀ ಲಕ್ಷ್ಮೀ ವೆಂಕಟರಮಣ ದೇವಸ್ಥಾನದ ರಥೋತ್ಸವ ಫೆ. ...ರಂದು ವಿಜೃಂಭಣೆಯಿಂದ ನೆರವೇರಿತು. ...ದೇ ಸಂದರ್ಭದಲ್ಲಿ, ಕೊಪ್ಪ ತಾ|| ಧಾ... ಸಂಸ್ಥೆಗಳ ಸಂಚಾಲಕರ ಸಮಿತಿಯ ...ದಲ್ಲಿ "ಧರ್ಮ ಜಾಗೃತಿ ಸಮಾ... ನಡೆಯಿತು.

ಅಂಗನವಾಡಿ ಉದ್ಘಾಟನೆ

ಕೊಂಗವಳ್ಳಿ: ಇಲ್ಲಿ ಫೆ. 3 ರಂದು ಅಂಗನವಾಡಿ ಕಟ್ಟಡದ ಉದ್ಘಾಟನೆಯನ್ನು ಕಮ್ಮರ್ಡಿ ಪ್ರಾಥಮಿಕ ಆರೋಗ್ಯ ಘಟಕದ ವೈದ್ಯಾಧಿಕಾರಿ ಡಾ|| ಎಸ್. ರಾಜಣ್ಣ ಅವರ ಅಧ್ಯಕ್ಷತೆಯಲ್ಲಿ ಹೆಚ್. ಜಿ. ಗೋವಿಂದ ಗೌಡರು ನೆರವೇರಿಸಿದರು. ಕೆ. ಸಿ. ಪದ್ಮಾವತಿ ಅಂಗನವಾಡಿಯ ವರದಿ ಓದಿದರು. ಡಿ.ಎಸ್. ವಿಶ್ವನಾಥ ಶೆಟ್ಟಿ ಮತ್ತು ಹೆಚ್.ಡಿ. ಶ್ರೀನಿವಾಸ್ ಮಾತನಾಡಿದರು.

ಕುಸುರಿಗೆ ಕೃಷ್ಣಪ್ಪ ಸ್ವಾಗತಿಸಿ, ಸಿ. ವೆಂಕಟಪ್ಪ ನಾಯಕ್ ವಂದಿಸಿದರು. ಚಿಕ್ಕ ಮಕ್ಕಳಿಂದ ವಿವಿಧ ವಿನೋದಾವಳಿ ಕಾರ್ಯಕ್ರಮ ನಡೆಯಿತು.

(ವರದಿ: ಚಾವಲ್ಮನೆ ಸುರೇಶ್ ನಾಯಕ್)

ಯಕ್ಷಗಾನ ... ಸ್ಪಷ್ಟನೆ

(3 ನೇ ಪುಟದಿಂದ)

ದುಶ್ಚಟಗಳಿರಬಹುದು. ಆದರೆ ಸಾಮಾನ್ಯವಾಗಿ ಜನ ಆಡಿಕೊಳ್ಳುವಷ್ಟಲ್ಲ. ಅಲ್ಲದೆ ಎಲ್ಲ ಕಲಾವಿದರೂ ಹಾಗೇ ಏನೋ ಎಂಬ ಭಾವನೆ ಜನರಲ್ಲಿ ಬರುವಂತೆ ಸಡಿಲವಾಗಿ ಮಾತಾಡಿಕೊಳ್ಳುವುದು ದೊಡ್ಡ ಬೇಜವಾಬ್ದಾರಿತನ; ಕಲೆ, ಕಲಾವಿದರ ಬೆಳವಣಿಗೆಗೂ ಮಾರಕ.

ಆದ್ದರಿಂದ ನಮ್ಮ ಅಭಿಪ್ರಾಯದಲ್ಲಿ, ಯಕ್ಷಗಾನ ಪ್ರದರ್ಶನದ ಗುತ್ತಿಗೆ ನಿಲ್ಲಿಸುವುದರಿಂದಲ್ಲ, ಗುತ್ತಿಗೆದಾರರೊಂದಿಗೆ ಸ್ಥಳೀಯ ಅನುಭವಿಗಳು ಸಹಕರಿಸುವುದರಿಂದ ಈ ಕಲೆಗೂ ಕಲಾಭಿಮಾನಿ ಜನಸಾಮಾನ್ಯರಿಗೂ ಪ್ರಯೋಜನವಾಗುತ್ತದೆ. ಇದನ್ನು ಎಲ್ಲರೂ ಸ್ವಲ್ಪ ಯೋಚಿಸಲೆಂದು ಹಾರೈಸುತ್ತೇವೆ.

—ಹೆಚ್.ಎಸ್.ಮಹಾಬಲೇಶ್ವರ,
ಹೆಚ್.ಎಂ.ಯೋಗೀಶ,
ಹೊಳೆಕೊಪ್ಪ, ಶೃಂಗೇರಿ ತಾಲ್ಲೂಕು.

ಮಹಾರುದ್ರಹೋಮ

ಅಡ್ಡಗದ್ದೆ: ಇಲ್ಲಿಗೆ ಸಮೀಪದಲ್ಲಿರುವ ಈಶ್ವರ ದೇವಸ್ಥಾನದ ಮಹಾರುದ್ರಹೋಮ ಚಿದ್ರವಳ್ಳಿಯಲ್ಲಿ ಫೆ. 3 ರಂದು ನಡೆಯಿತು. ಈ ಕಾರ್ಯಕ್ರಮಕ್ಕೆ ...ಗದ ಜನರು ತನು... ಕರಿಸಿದ್ದು, ಅವರೆಲ್ಲ... ಹೋಮ ಸಮಿತಿಯ... ದ್ದಾರೆ.

ಪ್ರಿನ್ಸಿಪ...

ಪುರಸಭಾ ಕಾರ್ಯಾಲಯ

ಕೊಪ್ಪ, ಚಿಕ್ಕಮಗಳೂರು ಜಿಲ್ಲೆ

1985–86ನೇ ಸಾಲಿಗೆ ಈ ಕೆಳಕಂಡ ವಿವಿಧ ಲೈಸೆನ್ಸ್‌ಗಳ ಹಕ್ಕು ಪಡೆಯುವ ಲೀಸ್ ಅಕ್ಷನ್ ನೋಟಿಫಿಕೇಷನ್ ನಂ: ಸಿ(4) ಪಿಆರ್ 17:84–
ದಿನಾಂಕ 20–1–85

ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ ಕೊಪ್ಪ ಪುರಸಭೆ ಸೇರಿದ ಈ ಕೆಳಕಂಡ ವಿವಿಧ ಲೈಸೆನ್ಸ್ ಲೀಸ್ ಅಕ್ಷನ್ ಅನ್ನು ಮಾಹೆಯಾನ ಕಂತಿ... ರೂಪದಲ್ಲಿ ದಿನಾಂಕ 24–2–85ರಂದು ಭಾನುವಾರ ಬೆಳಗ್ಗೆ 11–00 ಗಂಟೆಗೆ ಪುರ... ಸಭಾ ಕಾರ್ಯಾಲಯದಲ್ಲಿ ಬಹಿರಂಗ ಹರಾಜು ಮೂಲಕ ಪುರಸಭೆಯ ಅಧ್ಯಕ್ಷರು ಮು... ಮುಖ್ಯಾಧಿಕಾರಿಯವರಿಂದ ಈ ಕೆಳಕಂಡ ಷರತ್ತಿಗೊಳಪಟ್ಟು ವಿಲೇವಾರಿ ಮಾಡಲಾಗು... ವುದು. ಇಷ್ಟ ಉಳ್ಳವರು ಬಹಿರಂಗ ಹರಾಜಿನಲ್ಲಿ ಭಾಗವಹಿಸಬಹುದು.

ಕ್ರಮ ಸಂಖ್ಯೆ	ಲೈಸೆನ್ಸ್ ಬಾಬಿನ ಹೆಸರು
1)	ಮಾರ್ಕೆಟ್ಟಿನ 13 ಸ್ಟಾಲುಗಳಲ್ಲಿ 1985–86ನೇ ಸಾಲಿಗೆ ವ್ಯಾಪಾರ ಮಾಡುವ ಲೈಸೆನ್ಸ್ ಹಕ್ಕು
2)	ಸಂತೆ ಮೈದಾನದಲ್ಲಿರುವ ಅಕ್ಕಿ ಮಳಿಗೆಗಳಲ್ಲಿ ಅಕ್ಕಿ ವ್ಯಾಪಾರ ಮಾಡುವ ಹಕ್ಕು
3)	ಪುರಸಭೆಗೆ ಸೇರಿದ 2 ಮಾಂಸದ ಅಂಗಡಿಗಳನ್ನು ನಡೆಸಿಕೊಂಡು ಹೋ... ಗುವ ಹಕ್ಕು
4)	ಮೀನು ಮಾರ್ಕೆಟ್ಟಿನಲ್ಲಿರುವ 10 ಮಳಿಗೆಗಳಲ್ಲಿ ಮೀನು ವ್ಯಾಪಾರ ಮಾ... ಡುವ ಲೈಸೆನ್ಸ್ ಹಕ್ಕು
5)	ಸಂತೆ ಸುಂಕ ವಸೂಲಿ ಮಾಡುವ ಲೈಸೆನ್ಸ್ ಹಕ್ಕು
6)	ಪುರಸಭೆಗೆ ಸೇರಿದ ತೆಂಗಿನ ಮರದಿಂದ ಕಾಯಿಗಳನ್ನು ಕೀಳುವ ಹಕ್ಕು

ಷರತ್ತುಗಳು

1) ಲೈಸೆನ್ಸ್ ಹಕ್ಕನ್ನು ಪಡೆಯಲು ಹರಾಜಿನಲ್ಲಿ ಭಾಗವಹಿಸುವವರು ಬಿಡ್ ಮಾಡುವುದಕ್ಕೆ ಮುಂಚೆ ಅಕ್ಕಿ ಮಳಿಗೆಗಳನ್ನುಳಿದು 500–00ರೂ. ಡಿಪಾಜಿಟ್ ಮಾ... ಡತಕ್ಕದ್ದು

2) ಪುರಸಭೆಗೆ ಬಾಕಿದಾರರಾಗಿರುವವರು ಬಿಡ್‌ನಲ್ಲಿ ಭಾಗವಹಿಸಲು ಅನರ್ಹ... ರಾಗಿರುತ್ತಾರೆ.

3) ಅಖೈರು ಬಿಡ್‌ದಾರರು ಆರು ತಿಂಗಳ ಲೈಸೆನ್ಸ್ ಫೀಜನ್ನು ಹರಾಜು ಕೈದಾದ ಕೂಡಲೇ ಕಟ್ಟಿ ರಶೀದಿ ಪಡೆಯತಕ್ಕದ್ದು

4) ಉಳಿದ ಷರತ್ತು ವಿವರಗಳಿಗೆ ನೋಟಿಫಿಕೇಷನ್ ಈ ಪತ್ರದಲ್ಲಿ ಹಾಗೂ ಪುರಸಭಾ ಕಾರ್ಯಾಲಯದಲ್ಲಿ ಪಡೆಯಬಹುದು.

(ಸಹಿ)
ಅಧ್ಯಕ್ಷರು,
ಪುರಸಭೆ, ಕೊಪ್ಪ

(ಸಹಿ) ಆರ್. ಗುಂಡೂ ರಾವ್
ಮುಖ್ಯಾಧಿಕಾರಿ...

ಸಂಪಾದಕ, ಮುದ್ರಕ ಮತ್ತು ಪ್ರಕಾಶಕ: ಸೀಮನೆ ನಾಗರಾಜ್...

ಓದುಗರ ಪುಟ

ಯಕ್ಷಗಾನ ಪ್ರದರ್ಶನದ ಗುತ್ತಿಗೆ: ಒಂದು ಸ್ಪಷ್ಟನೆ

ಮಾನ್ಯರೆ,

ತಾ. 20-1-85ರ ನಿಮ್ಮ ಪತ್ರಿಕೆಯಲ್ಲಿ ಪ್ರಕಟವಾದ 'ಯಕ್ಷಗಾನ ಪ್ರದರ್ಶನದ ಗುತ್ತಿಗೆ ನಿಲ್ಲಲಿ' ಎಂಬ ಪತ್ರಕ್ಕೆ ಸ್ಪಷ್ಟೀಕರಣ.

ಸ್ಥಳೀಕರು ಯಾರಾದರೂ ಗುತ್ತಿಗೆ ವಹಿಸಿಕೊಳ್ಳದಿದ್ದರೆ ಬಸವಗೋಡು, ಕಮ್ಮರಡಿ, ಗಡಿಕಲ್ಲು ಇಂಥ ಸಣ್ಣ ಊರುಗಳಲ್ಲಿ ದೊಡ್ಡ ಮೇಳಗಳ ಯಕ್ಷಗಾನ ಪ್ರದರ್ಶನಗಳು ನಡೆಯಲಿಕ್ಕೇ ಸಾಧ್ಯವಿಲ್ಲ. ಏಕೆಂದರೆ, ಮೇಳದವರಿಗೆ ಸ್ಥಳೀಯ ವ್ಯವಸ್ಥೆ, ಪ್ರಚಾರ ಮುಂತಾದುವನ್ನು ನಿಭಾಯಿಸಲು ಆಗುವುದಿಲ್ಲ. ಆಸ್ಪೇಕೆ, ಶೃಂಗೇರಿ, ಜಯಪುರಗಳಂಥ ಊರುಗಳಲ್ಲಿ ಕೂಡ ಅವರಿಗೆ ಕಷ್ಟವಾಗುತ್ತದೆ.

ಆದರೆ ಈ ಸಣ್ಣ ಊರುಗಳಲ್ಲೂ ಸಹ ಅಪಾರ ಸಂಖ್ಯೆಯ ಯಕ್ಷಗಾನ ಪ್ರೇಮಿಗಳು ಪ್ರದರ್ಶನಗಳನ್ನು ನೋಡಿ ಆನಂದಿಸುತ್ತಾರೆ. ಆದ್ದರಿಂದ ಗುತ್ತಿಗೆ ವಹಿಸಿಕೊಳ್ಳುವುದು ಒಂದು ರೀತಿಯಿಂದ ಈ ಕಲೆಗೆ ಪ್ರೋತ್ಸಾಹ ಹಾಗೂ ಕಲಾಭಿಮಾನಿಗಳಿಗೆ ಒಂದು ಸದವಕಾಶ ಕಲ್ಪಿಸಿದಂತೆಯೇ ಆಗುತ್ತದೆ. ಇದರಲ್ಲಿ ಉಳಿಯುವ ಹಣ ಗುತ್ತಿಗೆದಾರರ ಶ್ರಮ ಮತ್ತು ರಿಸ್ಕ್‌ಗೆ ಪ್ರತಿಫಲವೇ ವಿನಃ ಅವರ ಉದ್ಧಾರಕ್ಕಾಗುವುದಿಲ್ಲ.

ಇನ್ನು ಪ್ರಸಿದ್ಧ ಕಲಾವಿದರು ಇಲ್ಲದಿದ್ದಾಗ ಮೇಳದವರು ತಮ್ಮ ಸ್ವಂತ ಆಟದಲ್ಲೂ ಅದನ್ನು ಪ್ರಚುರಪಡಿಸುವುದಿಲ್ಲ. ಗುತ್ತಿಗೆ ಆಟದಲ್ಲೂ ಅಷ್ಟೆ. ಕಾರಣ, ಸಾಧಾರಣವಾಗಿ ಯಕ್ಷಗಾನದಲ್ಲಿ ಏನಾದರೂ ಗಲಾಟೆ ಇದ್ದೇ ಇರುತ್ತದೆ. ಅದರಲ್ಲೂ ಇಂತಹ ವಿಚಾರಗಳು ಪ್ರೇಕ್ಷಕರನ್ನು ಪ್ರಚೋದಿಸುತ್ತವೆ. ಆದ್ದರಿಂದ ಈ ವಿಷಯದಲ್ಲಿ ಮೇಳದವರಾಗಲೀ, ಗುತ್ತಿಗೆದಾರರಾಗಲಿ ಅಸಹಾಯಕರು. ಬೇಕೆಂದೇ ಹಿರಿಯ ಕಲಾವಿದರನ್ನು ಬಿಟ್ಟು ಯಾರೂ ಆಟ ಆಡುವುದಿಲ್ಲ.

ಇನ್ನು ಕಲಾವಿದರ ದುಶ್ಚಟಗಳು ಗುತ್ತಿಗೆ ಆಟದಲ್ಲೇ ವಿಶೇಷವಾಗಿರುವುದೇನೂ ಅಲ್ಲ. ಮತ್ತೆ ಕೆಲವರು, "ಅವರು ಕುಡಿಯುತ್ತಾರೆ, ಕುಡಿದು ದಾರಿಯಲ್ಲಿ ಬಿದ್ದಿರುತ್ತಾರೆ" ಮುಂತಾಗಿ ಸುಮ್ಮನೆ ಅಪಪ್ರಚಾರ ಮಾಡುತ್ತಾರೆ. ಎಲ್ಲೋ ಕೆಲವು ಕಲಾವಿದರಿಗೆ

(4 ನೇ ಪುಟಕ್ಕೆ)

'ಸಪ್ತಶ್ರೀ'ಯವರಿಂದ ಉತ್ತಮ ನಾಟಕ

ಸ್ಥಳೀಯ 'ಸಪ್ತ ಶ್ರೀ ಹವ್ಯಾಸಿ ರಂಗ' ದವರು ನ.ರಾ. ಪುರದಲ್ಲಿ ಗಣರಾಜ್ಯೋತ್ಸವದ ಅಂಗವಾಗಿ 'ಅಂಗಿಬಟ್ಟೆ' ಎಂಬ ಸಾಮಾಜಿಕ, ರಾಜಕೀಯ ನಾಟಕ ಅಭಿನಯಿಸಿದರು. ಈ ನಾಟಕ, ಶ್ರೀಮಂತರುಗಳು ಹಣದ ಮದದಿಂದ ಕುರುಡಾಗಿ ವರ್ತಿಸುತ್ತಾ, ಹಳ್ಳಿಯ ಬಡಜನತೆಯ ಹೊಟ್ಟೆ-ಬಟ್ಟೆಯ ಮೇಲೆ ಹೊಡೆಯುವ, ಶೋಷಣೆಗೊಳಪಡಿಸುವ ರಾಜಕೀಯ ಕಥಾವಸ್ತುವಿನಿಂದ ಕೂಡಿದೆ.

ರಘುಪತಿಯವರು ದಕ್ಷ ನಿರ್ದೇಶನದೊಂದಿಗೆ ಉತ್ತಮವಾಗಿ ಅಭಿನಯಿಸಿದರು. ಪ್ರಭಾಕರ್ ಮತ್ತು ಎಂ.ಎಲ್.ಎ. ಪಾತ್ರಧಾರಿ ಏಜಾಜ್ ಅಹಮದ್ ಅಭಿನಯ ಕೂಡ ಉತ್ತಮವಾಗಿತ್ತು. ಅವರ ಮಾತು, ನಡೆ ನುಡಿಗಳು ನಟ 'ಮುಖ್ಯಮಂತ್ರಿ ಚಂದ್ರು'ವನ್ನು ನೆನಪಿಗೆ ತರುತ್ತಿದ್ದವು.

ಈ ಸಂಘದವರಿಂದ ಇನ್ನೂ ಉತ್ತಮ ನಾಟಕಗಳನ್ನು ನಿರೀಕ್ಷಿಸುತ್ತೇವೆ.

—ಮಹಾಬಲ ರಾವ್,
ನ. ರಾ. ಪುರ.

ಮೇಗೂರು ಅಂಚೆ ವ್ಯವಸ್ಥೆ ಬಗ್ಗೆ....

ಮಾನ್ಯರೆ,

ನಿಮ್ಮ ಪತ್ರಿಕೆಯಲ್ಲಿ ನಮ್ಮ ಈ ಪ್ರದೇಶದ (ಬಸರೀಕಟ್ಟೆ ಸುತ್ತಮುತ್ತಲಿನ) ಅಂಚೆ ಮತ್ತು ದೂರವಾಣಿ ಸಂಪರ್ಕ ವ್ಯವಸ್ಥೆಗಳ ದುಸ್ಥಿತಿಯ ಚಿತ್ರಣವನ್ನು ಬಹಳ ಸರಿಯಾಗಿ ಕೊಟ್ಟಿದ್ದೀರಿ. ಇದರಿಂದಲಾದರೂ ಸಂಬಂಧಪಟ್ಟ ಮೇಲಧಿಕಾರಿಗಳ ಕಣ್ಣು ತೆರೆದು, ಈ ವ್ಯವಸ್ಥೆಗಳು ಸ್ವಲ್ಪವಾದರೂ ಸುಧಾರಿಸಿಯಾವೆಂದು ಆಶಿಸುತ್ತೇವೆ.

ಮೇಗೂರು ಅಂಚೆ ಕಛೇರಿಯ ಬಗ್ಗೆ ಒಂದು ಮಾತು. ಸದ್ಯ ಇಲ್ಲಿ ಅಂಚೆ ಕಛೇರಿಯಿರುವುದು ದೇವಸ್ಥಾನದ ಆವರಣದಲ್ಲಿ. ಇದು ಸಾಮಾನ್ಯವಾಗಿ ಅಂಚೆ ಸೇವೆಯನ್ನು ಬಳಸುವಂಥ—ಮುಖ್ಯವಾಗಿ ಅಂಚೆ ಸಾಮಗ್ರಿಗಳನ್ನು ಕೊಳ್ಳುವಂಥ—ಜನವಸತಿಯಿಂದ ಬಹಳ ದೂರದಲ್ಲಿದೆ. ಹೀಗಾಗಿ ಎಷ್ಟೋ ಜನ ಜಯಪುರಕ್ಕೋ ಕೊಪ್ಪಕ್ಕೋ ಹೋದಾಗಲೇ ಕಾರ್ಡ್, ಕವರ್ ಮುಂತಾದುವನ್ನು ತಂದಿಟ್ಟುಕೊಳ್ಳುವುದಾಗಿದೆ. ಇದ್ದರಿಂದ ಈ ಕಛೇರಿಯ ವಹಿವಾಟು ಲೆಕ್ಕಕ್ಕೆ ಸಿಗದಾಗಿದೆ.

ಕಛೇರಿಯನ್ನು ಇನ್ನೂ ಸ್ವಲ್ಪ ಊರ ಮಧ್ಯಕ್ಕೆ, ಜಾನುವಾರು ಆಸ್ಪತ್ರೆಗಾಗಿ ಕಟ್ಟಿಸಿರುವ ಕಟ್ಟಡದಲ್ಲಿನ ಒಂದು ಕೊಠಡಿಗೆ ಸ್ಥಳಾಂತರಿಸಿದರೆ ಈ ಕಛೇರಿಯ ವಹಿವಾಟು ಸುಧಾರಿಸುವುದಲ್ಲದೆ, ಜನರಿಗೂ ಬಹಳ ಉಪಯೋಗವಾಗುತ್ತದೆ.

ಇದಲ್ಲದೆ, ಅಂಚೆ ತಲುಪಿಸುವ ವ್ಯವಸ್ಥೆಯೂ ಬಹಳ ಸುಧಾರಿಸಬೇಕಾಗಿದೆ.

—ನೊಂದ ಅಂಚೆ ಸೇವಾಕಾಂಕ್ಷಿಗಳು,
ಮೇಗೂರು, ಕೊಪ್ಪ ತಾಲ್ಲೂಕು